ಸಾಕ್ಷಿಯನ್ನು ದಿನಾಂಕಃ 03/09/2024 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ನಂ.1 ರಿಂದ 4 ರ ಪರ ವಕೀಲರಿಂದಃ**

ಬಸವರಾಜ ದಿಃ 13/02/2023 ರಂದು ತೀರಿಕೊಂಡಿದ್ದಾರೆ. ನೀವು ನಿಮ್ಮ ಗಂಡ ಕೂಡಿ ಇರಲಿಲ್ಲವಾ ಎಂದರೆ ಸಾಕ್ಷಿ ಹೋಗಿ ಬಂದು ಮಾಡುತ್ತಿದ್ದರು ಎಂದು ಹೇಳುತ್ತಾರೆ. ನನ್ನ ಗಂಡ ಗಜೇಂದ್ರಗಡದಲ್ಲಿ ವಾಸವಾಗಿದ್ದರು. ನೀವು ಜೀವನಾಂಶ ಕೋರಿ ಪ್ರಕರಣ ದಾಖಲಿಸಿದ್ದೀರಿ , ಇದರ ಅರ್ಥ ನಿಮ್ಮ ಮತ್ತು ನಿಮ್ಮ ಗಂಡನ ನಡುವೆ ಸಂಬಂಧ ಸರಿ ಇರಲಿಲ್ಲ ಎಂದರೆ ಸಾಕ್ಷಿ ನನ್ನ ಗಂಡ ಹೊಡೆ ಬಡಿ ಮಾಡಿ ಮನೆಯಿಂದ ಹೊರ ಹಾಕಿದ್ದರಿಂದ ಜೀವನಾಂಶ ಕೋರಿ ಪ್ರಕರಣ ದಾಖಲಿಸಿದ್ದೆ ಎಂದು ಹೇಳುತ್ತಾರೆ. ನನ್ನ ಗಂಡ ಹೃದಯ ಆಘಾತ ಆಗಿ ಕಿಡ್ನಿ ಫೇಲ್ ಆಗಿ ತೀರಿಕೊಂಡರು. ನೀವು ನಿಮ್ಮ ಗಂಡ ತೀರಿಕೊಂಡ ನಂತರ 1 ರಿಂದ 4 ನೇ ಪ್ರತಿವಾದಿ ಸಂಸ್ಥೆಗೆ ಅರ್ಜಿ ಹಾಕಿದ್ದೀರಾ ಎಂದರೆ ಸಾಕ್ಷಿ ಹಾಕಿದ್ದೆ ಅದಕ್ಕೆ ಅವರು ಉತ್ತರ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ನಿಪಿಃ 12 ನ್ನು ಸಾಕ್ಷಿಗೆ ತೋರಿಸಿ 1 ರಿಂದ 4 ನೇ ಪ್ರತಿವಾದಿ ಪರ ಸಂಸ್ಥೆಯು ನಿಮ್ಮ ಗಂಡನಿಗೆ 3 ಜನ ಹೆಂಡತಿಯರು ಇದ್ದಾರೆ , ಅದರಲ್ಲಿ ಯಾರು ದಾಖಲೆಗಳನ್ನು ಹಾಜರು ಪಡಿಸುತ್ತೀರಿ , ಅವರಿಗೆ ದುಡ್ಡು ಮತ್ತು ನೌಕರಿ ಕೊಡುತ್ತೇವೆ ಎಂದು ನಿಪಿಃ 12 ರ ಪ್ರಕಾರ ಉತ್ತರ ಕೊಟ್ಟಿದ್ದಾರೆ ಎಂದರೆ ಸರಿ. ನೀವು ವಾರಸಾ ಸರ್ಟಿಫಿಕೇಟ ತೆಗೆಸಿದ್ದೀರಾ ಎಂದು ಕೇಳಲಾಗಿ ಸಾಕ್ಷಿ ಅರ್ಜಿ ಕೊಟ್ಟಿದ್ದೇವು ಆದರೆ ಅವರು ಕೊಟ್ಟಿಲ್ಲ ಎಂದು ಹೇಳುತ್ತಾರೆ. ನನ್ನ ಮದುವೆಯ ಆಹ್ವಾನ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನೀವು ಮದುವೆಯ ಆಹ್ವಾನ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ , ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ವಾದ ಪತ್ರದಲ್ಲಿ ಶ್ರೀಮತಿ ನೀಲಾ ಎಂದು ಬರೆಸಿ ಹಾಕಿದ್ದೀರಿ , ಇದರಲ್ಲಿ ನೀವು ಮೊದಲನೆ ಹೆಂಡತಿ ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಹಾಜರು ಮಾಡಿದ್ದೇನೆ ಎಂದು ಹೇಳುತ್ತಾರೆ. ನನ್ನ ಗಂಡನ ಸರ್ವಿಸ್ ಪುಸ್ತಕ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಸದರಿ ಸರ್ವಿಸ್ ಪುಸ್ತಕದಲ್ಲಿ ತನ್ನ ಹೆಂಡತಿ ಮಕ್ಕಳು ಎಂದು ತೋರಿಸಿಲ್ಲ ಎಂದು ಹೇಳುತ್ತಾರೆ. ಬಸವರಾಜ ಇವರಿಗೆ ಮೂರು ಜನ ಹೆಂಡತಿ

ಇದಿದ್ದರಿಂದ ಅವರಲ್ಲಿ ಮೊದಲನೆ ಹೆಂಡತಿ ಎಂದು ದಾಖಲೆ ಹಾಜರು ಮಾಡದೇ ಇರುವುದರಿಂದ ಸರ್ಕಾರವರು ನಿಮಗೆ ಯಾವುದೇ ಸೌಲತ್ತು ಕೊಟ್ಟಿಲ್ಲ ಎಂದರೆ ಸಾಕ್ಷಿ ನಾನೇ ಮೊದಲನೆ ಹೆಂಡತಿ ಎಂದು ಹೇಳುತ್ತಾಳೆ. ನೀವು ಹೇಳುವಂತೆ ಸ್ಥಿರ ಮತ್ತು ಚರಾಸ್ತಿಗಳಲ್ಲಿ ನಾಮಿನಿ ಎಂದು ಯಾರನ್ನಾದರೂ ತೋರಿಸಿದ್ದಾರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಅದೇ ರೀತಿ ಸ್ಥಿರ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಾನೇ ಬಸವರಾಜನ ಹೆಂಡತಿ ಮಕ್ಕಳು ಎಂದು ಹೆಸರನ್ನು ಸೇರಿಸಲು ಸಂಬಂಧಿಸಿದ ರೆವಿನ್ಯೂ ಅಧಿಕಾರಿಗಳಿಗೆ ಯಾವುದೇ ಅರ್ಜಿ ಕೊಟ್ಟಿಲ್ಲ. ನೀವು ಸರಿಯಾದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸದೇ ಇರುವುದರಿಂದ ನೀವು ಬಸವರಾಜರವರ ಹೆಂಡತಿ ಅಲ್ಲ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಪ್ರತಿವಾದಿ ನಂ.5 ರಿಂದ 10 ನ್ಯಾಯಾಲಯಲ್ಲಿ ಕೂಗಿ ಕರೆಸಲಾಗಿ, ಗೈರು ಹಾಜರು ಆಗಿರುವುದರಿಂದ ಪಾಟೀ ಸವಾಲಿಗೆ ಕಾಲವಕಾಶ ನೀಡಿ, ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
03.09.2024
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**